ಶ್ರೀ ಹೆಚ್. ಆಂಜನೇಯ: ಸದರಿ ಪ್ರಶ್ನೆಯು Housingಗೆ ವರ್ಗಾವಣೆಯಾಗಿದೆ.

ಅಧ್ಯಕ್ಷರು: ಮಾನ್ಯ ಜಾಧವ್‌ರವರೆ, ಉತ್ತರ ಬಂದಿದೆಯೇ? Housing ಗೆ ಸಂಬಂಧಪಟ್ಟಂತೆ ಯಾರಾದರೂ ಉತ್ತರ ಕೊಡುತ್ತೀರಾ? ಉತ್ತರ ಏತಕ್ಕಾಗಿ ಇಲ್ಲಿ ಇಲ್ಲ, ಅದನ್ನೇ ನಾನು ಕೇಳುತ್ತಿರುವುದು. ತಮ್ಮ ಪ್ರಶ್ನೆಗೆ ನಾಳೆ ಹಾಕಿಕೊಳ್ಳುತ್ತೇವೆ.

ಡಾ॥ ಉಮೇಶ್ ಜಿ. ಜಾಧವ್: ಮಾನ್ಯ ಅಧ್ಯಕ್ಷರೆ, ನನ್ನದು ಒಟ್ಟು ಎರಡು ಪ್ರಶ್ನೆಗಳು ಇವೆ.

ಅಧ್ಯಕ್ಷರು: ನಾಳೆ ಹಾಕಿಕೊಳ್ಳುತ್ತೇವೆ. O.K. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ದಿನೇಶ ಗುಂಡೂರಾವ್ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ:23.07.2015ರ ಹತ್ತೊಂಬತ್ತನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 79 ಪ್ರಶ್ನೆಗಳ ಪೈಕಿ 49 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.